ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 27-2018

........................... ವಿರುದ್ಧ ............................

PW 01
CW 01

ಸಾಕ್ಷಿಯ ಹೆಸರು : ಅರುಣ ಜಾದವ
ತಂದೆಯ ಹೆಸರು : ಪ್ರಕಾಶ ಜಾದವ
ವಯಸ್ಸು : 37 ವರ್ಷ
ಉದ್ಯೋಗ : ಅರಣ್ಯ ರಕ್ಷಕ
ವಾಸ್ತವ್ಯ : ದಾಂಡೇಲಿ

ದಿನಾಂಕಃ 26-07-2022 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನಾನು ಕಳೆದ 9 ವರ್ಷ 6 ತಿಂಗಳಿಂದ ದಾಂಡೇಲಿ ವಲಯದಲ್ಲಿ ಅರಣ್ಯಾ ರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 20-03-2014 ರಂದು ಸಾಯಂಕಾಲ 6-00 ಗಂಟೆಯ ಆರೋಪಿ ಮನೆಯಲ್ಲಿ ಸಾಗ ಹಾಗೂ ಸಿಸಂ ತುಂಡುಗಳನ್ನು ಇಂದು ಇಟ್ಟಿರುವುದಾಗಿ ಖಚಿತ ಮಾಹಿತಿ ಬಂದ ಮೇರೆಗೆ, ಚಾಸಾ 4 ಮತ್ತು 5 ಹಾಗೂ ಪಂಚರಾದ ಚಾಸಾ 2 ಮತ್ತು 3 ರವರು ಕರೆದುಕೊಂಡು ಆರೋಪಿಯ ಮನೆಗೆ ಹೋಗಿ ತಪಾಸಣೆ ಮಾಡಿದಾಗ, ಮನೆಯ ಪಕ್ಕ ದನದ ಕೊಟ್ಟಿಗೆಯಲ್ಲಿ 01 ಸಾಗ ಚೌಕ ಹಾಗೂ 4 ಸಿಸಂ ಹಲಗೆಗಳು, ಹಾಗೂ ಕಟ್ಟಿಗೆ ಕತ್ತರಿಸುವ ಅಡ್ಡ ಗರಗಸ ಮತ್ತು ಬಾಚಿ ಹಾಗೂ ಮತ್ತೊಂದು ಕೋಣೆಯಲ್ಲಿ 01 ಸಾಗ ಚೌಕ ನಗ ಇರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ವಿಚಾರಿಸಲಾಗಿ ಪಕ್ಕದ

ಜಂಗಲ್‌ನಿಂದ ಅನಧೀಕೃತವಾಗಿ ತಂದು ಸಂಗ್ರಹಿಸಿರುವುದಾಗಿ ತಿಳಿಸಿರುತ್ತಾರೆ. ಸದ್ರಿ ಮುದ್ದೆ ಮಾಲಗಳನ್ನು ಪಂಚನಾಮೆಯ ಮೂಲಕ ವಶಪಡಿಸಿಕೊಂಡಿರುತ್ತಾರೆ. ನಂತರ ಮುದ್ದೆ ಮಾಲುಗಳನ್ನು ಹಾಗೂ ಆರೋಪಿಯನ್ನು ವಲಯ ಕಚೇರಿಗೆ ಕರೆದುಕೊಂಡು ಬಂದು ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿ, ಮುಂದಿನ ತನಿಖೆಗಾಗಿ ಚಾಸಾ 5 ರವರಿಗೆ ಹಸ್ತಾಂತರಿಸಿರುತ್ತೇನೆ. ಪ್ರ.ವ.ವರದಿಯಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ 1 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.